ತಾರೀಖು 19ನೆ ಸೆಪಟಂಬರ್ 1907.

ನಂ. ರ. 2122—ಕೋ. 48-07—2, ಸರ್ಕಾರಿ ಕೆಲಸದ ಅನುಕೂಲಕ್ಕಾಗಿ ಇದರಡಿ ಕಂಡ ಅಸಿಸ್ಟೆಂಟ್ ಕಮಿಷನರ್ ವರ್ಗಾವರ್ಗಗಳನ್ನು ಮಂಜೂರ್ಮಾಡಿ ಇದೆ :—

ಮಿ॥ ಮಹಮದ್ ರಜಾಯವರನ್ನು ಶಿವಮೊಗ್ಗದಿಂದ ಚಿತ್ರದುರ್ಗಕ್ಕೆ ಡಿಸ್ಟ್ರಿಕ್ಟ್ ಖಜಾನೆಯ ಚಾರ್ಜಿಗೆ ಹಾಕಿ ಇದೆ.

ಮಿ॥ ಬಿ. ಭೀಮರಾಯರನ್ನು ಚಿತ್ರದುರ್ಗದಿಂದ ಶಿವಮೊಗ್ಗಕ್ಕೆ ಎಕ್ಸೈಜು ಇಲಾಖೆಯ ಕೆಲಸಕ್ಕೆ ಹಾಕಿ ಇದೆ.

ಮಿ॥ ಆರ್. ಟಿ. ಮಹದೇವರಾಯರನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಎಕ್ಸೈಜು ಇಲಾಖೆಯಿಂದ ಜನರಲ್ ಡ್ಯೂಟಿ ಯಾ ಸಾಮಾನ್ಯ ಕೆಲಸಕ್ಕೆ ಹಾಕಿ ಇದೆ.

ಹುಕುಂ ಖಮೋಜೀಬ್,

ಸಿ. ಎಸ್. ಬಾಲಸುಂದರಂ ಐಯ್ಯರ್,

ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 18ನೆ ಸೆಪಟಂಬರ್ 1907.

ನಂ. 894—6652, ಸ್ಪೆಷಲ್ ಡ್ಯೂಟಿ ಮೇಲೆ ಇರುವ ಎಗ್ಜಿಕ್ಯೂಟಿವ್ ಇಂಜನಿಯರ್ ಮೆ॥ ವಿ. ಹೆಚ್. ಕರ್ಪ್ಪಿ, ಎಲ್. ಸಿ. ಇ., ಯವರಿಗೆ ಈ ಆಫೀಸಿನ ಸ॥ 1907ನೆ ಆಗಸ್ಟು 26ನೆ ತಾರೀಖು 814—6078ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಆಗಸ್ಟು 10ನೆ ತಾರೀಖಿನಾರಭ್ಯ ಕೊಟ್ಟಿದ್ದ ಬಂದು ತಿಂಗಳು ಪ್ರಿವಿಲೇಜ್ ರಜವನ್ನ ಇನ್ನೂ 11 ದಿನಗಳು ಜಾಸ್ತಿ ಮಾಡಲ್ಪಟ್ಟಿದೆ.

ಹುಕುಂ ಖಮೋಜೀಬ್,

ಬರ್ನಾರ್ಡ್ ಥಾಮಸ್ ಕ್ಯಾಪ್ಪ್ಲ್ ಆರ್. ಇ.,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್‌ಮೆಂಟ್ ಅಂಡರ್ ಸೆಕ್ರಿಟರಿ.